# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮುನಿರಾಜು ಗೌಡ ಪಿ.ಎಂ**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 554**
**ಉತ್ತರಿಸಬೇಕಾದ ದಿನಾಂಕ : 11.07.2023**
**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರಿ ಸಂಘದ ಬ್ಯಾಂಕುಗಳಲ್ಲಿ ಸಾಲ ಪಡೆಯುವಾಗ ನೀಡಿದ ಆಸ್ತಿ ದಾಖಲೆಗಳನ್ನು ಸಾಲ ಮರುಪಾವತಿಸಿದ ನಂತರ ಬ್ಯಾಂಕಿನ ನಿಯಮಗಳ ಪ್ರಕಾರ ಯಾರಿಗೆ ಹಿಂತಿರುಗಿಸಬೇಕಾಗುತ್ತದೆ; | ಸಹಕಾರ ಸಂಘ/ಸಹಕಾರ ಬ್ಯಾಂಕು/ಪಿಕಾರ್ಡ್ ಬ್ಯಾಂಕುಗಳಲ್ಲಿ ಸಾಲ ಪಡೆಯುವಾಗ ನೀಡಿದ ಆಸ್ತಿ ದಾಖಲೆಗಳನ್ನು ಸಾಲ ಮರುಪಾವತಿಸಿದ ನಂತರ ಆಯಾ ಸಹಕಾರ ಸಂಘ/ಸಹಕಾರ ಬ್ಯಾಂಕುಗಳ ನಿಯಮಗಳ ರೀತ್ಯಾ ಸಾಲ ಪಡೆದ ವ್ಯಕ್ತಿಗೆ ಆಸ್ತಿ ದಾಖಲೆಗಳನ್ನು ಹಿಂದಿರುಗಿಸಲಾಗುವುದು. ಸಾಲಗಾರ ಮರಣ ಹೊಂದಿದ್ದಲ್ಲಿ ಅವರ ಕಾನೂನು ಬದ್ಧ ವಾರಸುದಾರರಿಗೆ ಆಸ್ತಿ ದಾಖಲೆಗಳನ್ನು ಹಿಂದಿರುಗಿಸಲಾಗುವುದು. |
| ಆ) | ಆಸ್ತಿಯು ಜಂಟಿ ಮಾಲೀಕತ್ವದಲ್ಲಿ ಇದ್ದು, ಮಾಲೀಕತ್ವದಲ್ಲಿ ಇರುವ ಎಲ್ಲರೂ ಸೇರಿ ಒಬ್ಬ ವ್ಯಕ್ತಿಗೆ ಜಿ.ಪಿ.ಎ. ಮಾಡಿದ್ದಲ್ಲಿ ಜಿ.ಪಿ.ಎ. ಪಡೆದ ವ್ಯಕ್ತಿ ಬ್ಯಾಂಕಿನಲ್ಲಿ ಸಾಲ ಪಡೆದು ಸಾಲ ಮರುಪಾವತಿಸಿದ್ದಲ್ಲಿ, ಬ್ಯಾಂಕಿನ ನಿಯಮಗಳ ಪ್ರಕಾರ ಆಸ್ತಿಯ ದಾಖಲಾತಿಗಳನ್ನು ಜಿ.ಪಿ.ಎ. ಅನ್ನು ಹೊಂದಿರುವ ಮತ್ತು ಸಾಲ ಪಡೆದು ಮರುಪಾವತಿ ಮಾಡಿರುವ ವ್ಯಕ್ತಿಗೆ ನೀಡಬೇಕೋ ಅಥವಾ ಸಾಲ ಅಡಮಾನಕ್ಕೆ ಸಂಬಂಧಿಸಿದ ಸ್ವತ್ತಿನ ಇತರೇ ಮಾಲೀಕರಿಗೆ ನೀಡಲು ಅವಕಾಶವಿದೆಯೇ: ಹಾಗಿದ್ದಲ್ಲಿ, ಸದರಿ ನಿಯಮಕ್ಕೆ ಸಂಬಂಧಿಸಿದ ಆದೇಶ/ಕಾಯ್ದೆಯ ಪ್ರತಿಯನ್ನು ನೀಡುವುದು; | ಆಸ್ತಿಯು ಜಂಟಿ ಮಾಲೀಕತ್ವದಲ್ಲಿ ಇದ್ದು, ಮಾಲೀಕತ್ವದಲ್ಲಿ ಇರುವ ಎಲ್ಲರೂ ಸೇರಿ ಒಬ್ಬ ವ್ಯಕ್ತಿಗೆ ಜಿ.ಪಿ.ಎ. ಮಾಡಿದ್ದಲ್ಲಿ ಹಾಗೂ ನೀಡಿರುವ ಜಿ.ಪಿ.ಎನಲ್ಲಿ ದಾಖಲೆಗಳನ್ನು ಜಿ.ಪಿ.ಎದಾರನು ಪಡೆಯುವ ಅಧಿಕಾರ ನೀಡಿದಂತಹ ಸಂದರ್ಭದಲ್ಲಿ ಅದರಂತೆ ಜಿ.ಪಿ.ಎ.ದಾರ ಬ್ಯಾಂಕಿನಲ್ಲಿ ಸಾಲ ಪಡೆದು ಮರುಪಾವತಿಸಿದ್ದಲ್ಲಿ, ಬ್ಯಾಂಕಿನ ನಿಯಮಗಳ ಪ್ರಕಾರ ಆಸ್ತಿಯ ದಾಖಲಾತಿಗಳನ್ನು ಜಿ.ಪಿ.ಎ ದಾರರಿಗೆ ಸಾಲ ನೀಡಿದ ಬ್ಯಾಂಕುಗಳು ಹಿಂತಿರುಗಿಸುತ್ತವೆ. |
| ಇ) | ಸದರಿ ನಿಯಮವನ್ನು ಉಲ್ಲಂಘಿಸಿ, ಸಾಲ ಮತ್ತು ಅಡಮಾನಕ್ಕೆ ಸಂಬಂಧಿಸದ ವ್ಯಕ್ತಿಗಳಿಗೆ ದಾಖಲೆಗಳನ್ನು ನೀಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಸದರಿ ನಿಯಮಗಳನ್ನು ಉಲ್ಲಂಘಿಸಿ ಸಾಲ ಮತ್ತು ಅಡಮಾನಕ್ಕೆ ಸಂಬಂಧಿಸದ ವ್ಯಕ್ತಿಗಳಿಗೆ ದಾಖಲೆಗಳನ್ನು ನೀಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ, ಶಿಸ್ತು ಕ್ರಮ ಕೈಗೊಳ್ಳಲು ಸಹಕಾರ ಬ್ಯಾಂಕುಗಳ ಆಡಳಿತ ಮಂಡಲಿಗೆ ಅವಕಾಶವಿರುತ್ತದೆ. |

**ಸಂಖ್ಯೆ: ಸಿಒ 127 ಸಿಸಿಬಿ 2023**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು